No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 216] ಶನಿವಾರ 7—8—48 [ಬಿಡಿ ಪ್ರತಿ 3 ಪೈ

ಸುದ್ದಿಗಳು

† ನವದೆಹಲಿ, ಆ 4 — ಕಾಶ್ಮೀರದಲ್ಲಿ ಭಾರತದ ವಿರುದ್ಧ ಪಾಕೀಸ್ತಾನದ ಅನಫೋಷಿತ ಸಮರದಲ್ಲಿ ಬ್ರಿಟೀಷ್ ಅಧಿಕಾರಿಗಳನ್ನು ಉಪಯೋಗ ಮಾಡಿಕೊಳ್ಳುತ್ತಿರುವ ಬಗ್ಗೆ ಭಾರತ ಸರ್ಕಾರಂ ಬ್ರಿಟೀಷ್ ಸರ್ಕಾರಕ್ಕೆ ಪ್ರತಿಭಟನೆ ಕಳಿಸಿದೆ

† ವಾಷಿಂಗ್ಟನ್, ಆ 5 — ಭಾರತ-ಪಾಕೀಸ್ತಾನ ಕಾಶ್ಮೀರದಲ್ಲಿ ಸಮರ ನಿಲ್ಲಿಸುವಂತೆ ವಿಶ್ವಸಂಸ್ಥೆ ಆಜ್ಞೆಯಿಾಯಲಿದೆ

ಹೈದರಾಬಾದ್ ಆಂತರಿಕ ಶಾಂತಿ ರಕ್ಷಣೆ ಮಾಡುವುದು ನಿಜಾಂರಿಗೆ ಸಾಧ್ಯವಿಲ್ಲದಿರುವುದರಿಂದ ಶಾಂತಿ ರಕ್ಷಣೆ ಮಾಡಲು ನಿಜಾಮರು ಭಾರತ ಸರ್ಕಾರಕ್ಕೆ ಸಹಕಾರ ಕೊಡಬೇಕೆಂದು ನವಾಬ್ ಜೈಕ್ ಯಾಲ್ ಜಂಗ್‌ರವರನ್ನು ಹೈದರಾಬಾದಿಗೆ ಕಳಿಸಲಾಗಿದೆ.

ಹೈದರಾಬಾದ್ ಆಂತರಿಕ ಪರಿಸ್ಥಿತಿ ತೀರಾ ಹದಗೆಟ್ಟು,, ಗೂಂಡಾ ಆಡಳಿತ ಆರಂಭವಾಗಿರುವುದರಿಂದ ಭಾರತ ಸರ್ಕಾರ ಹೈದರಾಬಾದ್ ಮೇಲೆ ದಂಡಯಾತ್ರೆ ಮಾಡುವುದು ಖಂಡಿತವೆಂದು ಗೊತ್ತಾಗಿದೆ

ಗಂಗಾಪುರ-ಕುಲಾಲಿ ಬಳಿ ವದರಾ ಸ-ಬೊಂಬಾಯಿ ಎಕ್ಸ್‌ಪ್ರೆಸ್ ನಿಲ್ಲಿಸಲು ರಜಕಾರರು ಮಾಡಿದ ಪ್ರಯತ್ನ ವಿಫಲವಾಯಿತು ಆದರೆ ಅಲ್ಲಿಸ ಸ್ಟೇಷನ್ ಮಾಸ್ಟರು ಪತ್ತೆಯಿಲ್ಲದಿರುವುದು ಅವರು ಕೊಲೆಯಾಗಿರಬಹುದೆಂದು ನಂಬಲಾಗಿದೆ.

ಸಂಧಾನ ಫಲಕಾರಿಯಾಗದಿದ್ದ ಬಗ್ಗೆ ಸರ್ ಮಿರ್ಜಾ ನಿಜಾಂರಿಗೆ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರು ವ್ಯಾಪಾರ ಸರಕುಗಳ ಮೇಲಿನ ತೆರಿಗೆ ಕಾನೂನು ಇನ್ನೂ ಜಾರಿಗೆ ಬಂದಿಲ್ಲ ಆದರು ಹಲವು ವ್ಯಾಪಾರಿಗಳು ತೆಗೆದುಕೊಳ್ಳುತ್ತಿರುವ ಅಂಶ ಗಮನಕ್ಕೆ ಬಂದಿದೆ ಸಾರ್ವಜನಿಕರು ಇದನ್ನು ಗಮನಿಸಬೇಕು ಎಂದು ಸರ್ಕಾರಿ ಪ್ರಕಟಣೆ.

ಭಾರತ-ಹೈದರಾಬಾದಿನ ಸಂಧಾನದ ಬಗ್ಗೆ ಸರ್ ವಿರ್ಜ ಪ್ರವೇತಿಸಿದು ನೂತನ ಕ್ರಾಂತಿಯೊಂದನ್ನು ತಂದಿದೆ

ಸರ್ ವಿರ್ಜ ಸಾಧಾನವನ್ನು ಪ್ರತಿಭಟಿಸಿ ಹೈದರಾಬಾದಿನ ಪ್ರಧಾನಿ ಮಿರ್ ಲಾಯಕ್ ಅಲ್ಲಿ ನಿಜಾಂರವರಿಗೆ ಅರ್ಪಿಸಿದ ರಾಜೀನಾಮೆ ಪತ್ರ ಇನ್ನೂ ಅಂಗೀಕೃತವಾಗಿಲ್ಲ

ಉಸ್ಮಾನಾಬಾದ್ ಜಿಲ್ಲೆ ಬಾರ್ಸಿ-ಸೋಲಾಪುರ ರಸ್ತೆಯ 8 ಮೈಲಿಗಳನ್ನು ಕಾಯುತ್ತಿರುವ ಭಾರತ ಸೇನೆಯನ್ನು ಉಚ್ಚಾಟಿಸಬೇಕೆಂದು ಇತ್ತೆಹಾದಿನ ಪ್ರಾಬಲ್ಯವಿರುವ ಮಂತ್ರಿ ಮಂಡಲ ಇತ್ತೀಚಿನ ಸಭೆಯಲ್ಲಿ ತೀರ್ಮಾನಿಸಿದುದರಿಂದ, ಆ ರೀತಿ ಮಾಡುವುದರಿಂದ ಅತಿಕೇಡು ಉಂಟು ಎಂದು ತಿಳಿಸಿ ನಿಜಾಮರ ಕಮ್ಯಾಂಡರ್ ಇನ್ ಛೀಫ್‌ರವರಾದ ಜ || ಎಡ್ರೂಸ್ ತಮ್ಮ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ನಿಜಾಂರನ್ನು ಪ್ರಾರ್ಥಿಸಿದ್ದಾರೆ.

ಜೂನ್ ತಿಂಗಳಿನ ಷರತ್ತುಗಳ ಮೇಲೆ ಒಪ್ಪಂದ ಸಾಧ್ಯವೇ ಇಲ್ಲ ಎಂದಿದ್ದಾರೆ ಪಟೇಲ್ ಮತ್ತು ನೆಹರು.

ಇತ್ತೆಹಾದ್ ಮುಸ್ಲಿಲೀಗ್ ಸಂಸ್ಥೆಯವರು ಸರ್ ಮಿರ್ಜ ಮತ್ತು ಶ್ರೀ ವಿ. ಪಿ ಮೆನನ್ ಹೈದರಾಬಾದಿಗೆ ಭೇಟಿ ಕೊಡುವ ಬಗ್ಗೆ ನಿಷೇಧ ಸೂಚಿಸಿದುದರಿಂದ ಇವರುಗಳನ್ನು ಆಹ್ವಾನಿಸಬೇಕೆಂದು ನಿಶ್ಚಯಿಸಿದ ನಿಜಾಂರವರ ತೀರ್ಮಾನ ವ್ಯರ್ಥವಾಯಿತೆಂದು ಗೊತ್ತಾಗಿದೆ

ಹೈದರಾಬಾದಿಗೆ ಆಹಾರ ವಸ್ತು ಔಷಧ ಸಾಮಗ್ರಿಗಳನ್ನು ಕಳುಹಿಸುವ ಬಗ್ಗೆ ಭಾರತದ ಆರ್ಥಿಕ ದಿಗ್ಬಂಧನವಿಲ್ಲ ಎಂದು ಭಾರತ ಸರ್ಕಾರ ಸಂಸ್ಥಾನ ಶಾಖಾ ಕಾರ್ಯದರ್ಶಿ ಪ್ರಕಟಿಸಿದ್ದಾರೆ

ಹೈದರಾಬಾದು ಯಾಲ್ಗಂಗಿಯಲ್ಲಿ ಗಲಭೆ ನಡೆಸುತ್ತಿದ್ದ ರಜಾಕರನ್ನು ಭಾರತ ಸೇನೆ ಸುಗ್ಗಿ ಬಲಿಹಾಕಿದೆ

ಅಖಿಲ ಭಾರತ ರಾಷ್ಟ್ರೀಯ ಸ್ವಯಂ ಸೇವಕ ದಳದ ವ್ಯವಸ್ಥಾಪಕ ಗುರೂಜಿ ಗೋಲ್ವಾರ್ಕರು ಖುಲಾಸೆಯಾದರು

ರಜ್ವಿ ಹೈದರಾಬಾದ್ ಪ್ರತಿನಿಧಿಯಾಗಿ ದೆಹಲಿಯಲ್ಲಿ ನೇಮಿಸಲ್ಪಟ್ಟರು

ಕಂಟೆಪ್ಟ್ ಮೊಕದ್ದಮೆಯಲ್ಲಿ ವಾದ ವಿವಾದ

ಬೆಂಗಳೂರು, ಆ 5 — ಶ್ರೀ ಪಿ ಬಿ ಶ್ರೀನಿವಾಸ್, ಶ್ರೀ ಪಿ ಆರ್. ರಾಮಯ್ಯ ಮತ್ತು ಶ್ರೀ ಎಲ್. ಎಸ್. ರಾಜುರವರುಗಳ ರಿವಿಜಿ ಅರ್ಜಿಗಳು ಈ ದಿನ ಹೈಕೋರ್ಟಿಗೆ ಬಂದು ತಾ|| 12 ಕ್ಕೆ ಮುಂದುವರಿಯುವುದಕ್ಕೆ ಮುನ್ನ ಕೋರ್ಟಿನಲ್ಲಿ ನಡೆದ ವಾದ ವಿವಾದಗಳ ಸಂಕ್ಷಿಪ್ತ ಭಾಗ ಈ ರೀತಿ ಇದೆ—

ಶ್ರೀ ಕೆ. ರಾಜಾ ಅಯ್ಯರ್—ವಿಶೇಷ ಶಾಸನ ಏನು ಬೇಕಾದರೂ ಮಾಡಬಹುದು. ಗಂಡಸರನ್ನು ಹೆಂಗಸರನ್ನಾಗಿಯೂ, ಹೆಂಗಸರನ್ನು ಗಂಡಸರನ್ನಾಗಿಯೂ ಮಾಡಲಾರದೇ ಹೋದರು ಅವಕ್ಕೆ ಎಲ್ಲಾ ಅಧಿಕಾರವ್ಯಾಪ್ತಿಯೂ ಇದೆ.

ಚೀಫ್ ಜಸ್ಟಿಸ್—ಅವೂ ಕೂಡಾ ಆಗುವ ನಿದರ್ಶನಗಳಿವೆ. ಏನು ಬೇಕಾದರೂ ಆಗಬಹುದು. ಆದರೆ ನ್ಯಾಯಾಸ್ಥಾನದ ಆಜ್ಞೆಗಳನ್ನು ಮೊಟಕಗೊಳಿಸುವಂಥಹ ವಿಶೇಷ ಶಾಸನಗಳಿಗೆ ಏನಾದರೂ ಉದಾಹರಣೆಗಳಿವೆಯೇ?

ಶ್ರೀ ಕೆ. ರಾಜಾ ಅಯ್ಯರ್—ಸಧ್ಯಕ್ಕೆ ಯಾವುದೂ ನನ್ನ ನೆನಪಿನಲ್ಲಿಲ್ಲ. ಆದರೆ ಹೈದರಾಬಾದಿನ ನಿಜಾಮರು ಫರ್ಮಾನ್ ಹೊರಡಿಸಿ ನ್ಯಾಯಾಸ್ಥಾನದ ಆಜ್ಞೆಯನ್ನು ತಡೆದು ನಿಲ್ಲಿಸಿದ ಉದಾಹರಣೆ ಇದೆ.

ಚೀಫ್ ಜಸ್ಟಿಸ್—ಹೈದರಾಬಾದಿನಲ್ಲಿ ಏನುಬೇಕಾದರೂ ನಡೆಯಬಹುದು. ಈ ಉದಾಹರಣೆ ಬೇಡ ಈ ಸಂಬಂಧದಲ್ಲಿ ಯಾವ ಕೋರ್ಟ್ ತೀರ್ಮಾನಗಳಾದರೂ ಇವೆಯೇ?

ಶ್ರೀ ರಾಜಾ ಅಯ್ಯರ್—ನನಗೆ ತಿಳಿದಷ್ಟು ಮಟ್ಟಿಗೆ ಇಲ್ಲ ಈಗ ಹೊರಟಿರುವ ವಿಶೇಷ ಶಾಸನದಂತೆ ಇರಲಾರದು. (ತಾ. ನಾ.)

At Opera
7—8—48 ರಿಂದ
VISWAS
ಸುರೇಂದ್ರ, ಮೆಹತಾಬ್, ಬೇಬಿ ಮುಧುರಿ ಪಾತ್ರವಹಿಸಿರುವ
ವಿಶ್ವಾಸ್
(ಅಮೋಘ ಹಿಂದಿ ಚಿತ್ರ)
.... ಪ್ರತಿದಿನ 3 ಆಟಗಳು ....

Indian Millionaire in America

ಅಮೇರಿಕಾದಲ್ಲಿ ಭಾರತೀಯ ಕೋಟೀಶ್ವರ

(ಮುಂದುವರಿದುದು)

ಭಾರತ ದೇಶದಲ್ಲಿ ಎಷ್ಟೋ ಲಕ್ಷ ಟನ್ನುಗಳ ಕಬ್ಬಿಣವು ಗಣಿಯಲ್ಲಿ ಬಿದ್ದಿದೆ. ಅದನ್ನು ಅಗೆದು ಮೇಲೆ ತೆಗೆಯುವ ಸಾಧನೆಯು ಭಾರತೀಯರಿಗಿಲ್ಲದಾಗಿದೆ. ಹಾಗೆ ಅದನ್ನು ತೆಗೆಯಬಲ್ಲವರಾದರೆ ಆ ದೇಶಕ್ಕೆ ಬೇಕಾದ ಯಂತ್ರಗಳು, ಸಲಕರಣೆಗಳು, ಗರ್ಡರುಗಳು ಮೊದಲಾದವುಗಳಿಗೆ ಅದು ಹೆಚ್ಚು ಕಡಮೆ ಸರಿಹೋಗುತ್ತದೆ. ಆ ದೇಶದ 7 ಲಕ್ಷ ಮಂದಿ ಗಾಮಾಗಳಿಗೆ ವಿದ್ಯುಚ್ಛಕ್ತಿಯು ಬೇಕಾಗಿದೆ. ಒಂದು ಮಾತಿನಲ್ಲಿ ಹೇಳುವುದೆಂದರೆ ಭಾರತದೇಶಕ್ಕೆ ಬೇಕಾಗಿರುವುದು ಅನೇಕ ಮಂದಿ ಇಂಜಿನೀರುಗಳು ಮತ್ತು ಡಾಕ್ಟರುಗಳು.

ಒಬ್ಬ ಲಾಯರು ಮಿತ್ರನಿಗೆ ಗೋಮಾ ತನ್ನ ಸಂಕಲ್ಪವನ್ನು ತಿಳಿಯಪಡಿಸಲು 'ಏಕಯ್ಯಾ ನಿನಗೆ ಈ ವೃಥಾ ಸ್ವಪ್ನ ? 40 ಕೋಟಿ ವಂದಿಗೆ ನೀನೊಬ್ಬನು ಏನು ಸಹಾಯ ಮಾಡಬಲ್ಲೆ ? ಕೋಟಿಗಟ್ಟಲೆಯ ಡಾಲರುಗಳನ್ನು ವ್ಯಯ ಮಾಡಿ ಕೋಟಿಗಟ್ಟಲೆ ಜನಗಳು ಸಹಾಯ ಮಾಡಿದರಲ್ಲದೆ ಭಾರತ ದೇಶದ ಗ್ರಾಮಗಳು ಚೇತರಿಸಿಕೊಂಡು ಬಲಿಷ್ಠಗಳೂ ಸ್ವಯಂಪೋಷಕಗಳೂ ಆಗಲಾರವು. ಏಕೆ ನೀವು ಇಷ್ಟು ಅತುರತೆಯಿಂದಿರುವಿರಿ' ಎಂದು ನಿರುತ್ಸಾಹಪಡಿಸಿದನು.

'ಒಂದು ಹೆಜ್ಜೆಯನ್ನು ಮುಂದಿಡಲಾಕಲು ಮೊದಲಿಟ್ಟರೆ ಅಲ್ಲವೆ ಎಷ್ಟು ದೀರ್ಘ ಪ್ರಯಾಣವಾದರೂ ನಡೆಯಬಲ್ಲುದು ? ನಾನು ಆ ಹೆಜ್ಜೆಯನ್ನಿಡಲು ನಿಶ್ಚಯಿಸಿರುವೆನು' ಎಂದು ಗೋಮಾ ಉತ್ತರವಿತ್ತನು.

ಭಾರತೀಯ ವಿದ್ಯಾರ್ಥಿಗಳ ಭಾಗ್ಯ

ಭಾರತೀಯ ವಿದ್ಯಾರ್ಥಿಗಳನ್ನು ಅಮೆರಿಕಾ ಪಾಠಶಾಲೆಗಳಿಗೆ ಆಕರ್ಷಿಸಲು ದಂಪತಿಗಳಿಬ್ಬರೂ ಪ್ರಾರಂಭಿಸಿದರು. ಬುದ್ಧಿಶಾಲಿಗಳಾದ ವಿದ್ಯಾರ್ಥಿಗಳಿಗೆ ಓದಿಕೊಳ್ಳಲು ತಕ್ಕ ಸೌಕರ್ಯಗಳನ್ನು ಕಲ್ಪಿಸಲು ನಿಶ್ಚೈಸಿದರು. ಅವರು ಕಲಿಯಬೇಕಾದ ವಿದ್ಯೆಗಳು— ರೋಗ ನಿವಾರಣೆ ಅಂಟುವ್ಯಾಧಿಗಳನ್ನು ತಡೆಯುವಿಕೆ. ತಾಯಿಮಕ್ಕಳಿಗೆ ವ್ಯಾಧಿಬರದಂತೆ ನೋಡಿಕೊಳ್ಳುವಿಕೆ, ನಿರ್ಮಾಣಯಂತ್ರಗಳ ತಯಾರಿ, ಅವುಗಳನ್ನು ನಡೆಸುವಿಕೆ ಮೊದಲಾದುವು. ಇದಕ್ಕೆ ಅವಶ್ಯಕವಾದ ಖರ್ಚನ್ನು ಶೇಖರಿಸಲು ಅವರು ಒಂದು ಟ್ರಸ್ಟನ್ನು ಏರ್ಪಾಡುಮಾಡಿರುವರು. ಆ ಟ್ರಸ್ಟನ್ನು ಕೂಡ ತಮ್ಮ ವ್ಯಾಪಾರದಲ್ಲಿ ಒಬ್ಬ ಭಾಗಸ್ವಾಮಿಯಾಗಿ ಮಾಡಿದರು.

ಮೊದಲನೆಯ ವರ್ಷ ಅವರು 14 ಸ್ಕಾಲರ್‌ಷಿಪ್‌ಗಳನ್ನು ಕೊಟ್ಟರು. ವಿದ್ಯಾರ್ಥಿಗಳು ತಾವು ಇಷ್ಟಪಡುವ ಎಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಬಹುದು. ಅವರಿಗೆ ಬಂದುಹೋಗಬಹುದು. ಅವರಿಗೆ ಬಂದುಹೋಗಲು ಪ್ರಯಾಣ ಖರ್ಚುಗಳನ್ನು ತಿಂಗಳೊಂದಕ್ಕೆ 150 ಡಾಲರುಗಳ ಸ್ಕಾಲರ್‌ಷಿಪ್ ಸ್ಯಾಂಕ್ಷನ್ ಮಾಡಿದರು. ಜಾತಿ, ಮತ ರಾಜಕೀಯ ಪಕ್ಷಪಾತಗಳಿಲ್ಲದೆ, ಯಾವ ಭಾರತೀಯನಾಗಲೀ ಅವನ್ನು ಗ್ರಹಿಸಬಹುದು. ವಿದ್ಯಾರ್ಥಿಯು ತಿಳುವಳಿಕೆಯುಳ್ಳವನಾಗಿ, ತನ್ನ ದೇಶಾಭ್ಯುದಯಕ್ಕಾಗಿ ಕೆಲಸಮಾಡುವ ದೀಕ್ಷೆಯುಳ್ಳವನಾಗಿರತಕ್ಕದ್ದು.

ಈ ಸಮಾಚಾರವನ್ನು ಕೇಳಿದಾಗ ಭಾರತ ದೇಶದಲ್ಲಿ ಒಂದು ನೂತನ ಉತ್ಸಾಹವು ಉದಯಿಸಿತು. ಅಲಿಸ್ ಚಾಲ್ಮರ್ಸ್ ಎಂಬ ಕರಪತ್ರಿನಿಯಲ್ಲಿ ವಿದ್ಯೆಯ ಅನುಭವವನ್ನು ಪಡೆಯಲು ನಾಲು ಮಂದಿ ಯುವಕ ಇಂಜನಿಯರಿಂಗು ವಿದ್ಯಾರ್ಥಿಗಳು, ಸೀಗಾವ್ಮ್ಸ್ ಎಂಬ ನಗರದಲ್ಲಿ ಕೈಗಾರಿಕೆಗಳಿಗೆ ಉಪಯೋಗಪಡುವ ಅಲ್ಯುಹಾಲನ್ನು ತಯಾರಿಸಲು ಮುವ್ವರು ಕೆಮಿಸ್ಟ್ರಿ ವಿದ್ಯಾರ್ಥಿಗಳು, ಸಣ್ಣ ಯಂತ್ರಗಳನ್ನೂ ಮೋಟಾರುಗಳನ್ನು ತಯಾರಿಸುವಿಕೆಯನ್ನೂ ಕಲಿಯಲು ಗಿಷಾಲ್ಮರ್ಸ್ ಮಿಷನ್ ಕಂಪೆನಿ ಷಾಗಿಗೆ ಒಬ್ಬ ವಿದ್ಯಾರ್ಥಿಯೂ ಹೊರಟು ತಮ್ಮ ತಮ್ಮ ತರಗತಿಗಳಲ್ಲಿ ಸೇರಿದರು.

ಅವರಲ್ಲಿ ಇಬ್ಬರ ವಿಷಯದಲ್ಲಿ ವಾಲ್ಮರ್ ಬಹಳ ಗೌರವದೊಡನಿದ್ದನು ಅವರ ಕೃಷಿಯಿಂದ ಅಮೇರಿಕಾ ಇಂಡಿಯಾಗಳಿಗೆ ಎರಡಕ್ಕೂ ಕೀರ್ತಿ ಬರುವುದೆಂಬುದು ಆತನ ನಂಬಿಕೆ.

ಅವರಲ್ಲಿ ಒಬ್ಬಾತನು ಡಾ|| ವಿ. ಜೆ. ಭಟ್, ಆತನು ಮೂತ್ರಗ್ರಂಥಿ ಸಂಬಂಧವಾದ ವ್ಯಾಧಿಗಳನ್ನು ನಿರ್ಮೂಲಗೊಳಿಸಲು, ಪರಿಶೋಧನೆಗಳನ್ನು ಮಾಡಿ ವಿಜಯವಂತನಾದನು. ವೇಲೂರು ಗಡ್ಡರ್ ಹಾಸ್ಪಿಟಲ್ ಸರ್ಜನ್ ಡಾ|| ಎಂ. ಆಶೀರ್ವಾದಂ ಅಪರೇಷನ್ ಸಲಕರಣೆಗಳಿಲ್ಲದೆ ಬಹಳ ತೊಂದರೆಪಡುತ್ತಿದ್ದನು. ಆತನು ಆ ಆಯುಧಗಳನ್ನು ತಯಾರಿಸಲು ಕಲಿಯಲಿಕ್ಕಾಗಿ ಅಲ್ಲಿಗೆ ಹೋಗಿ ಕೃತಕೃತ್ಯನಾದನು.

1947 ಕ್ಕೆ ವಾಟೂಮಲ್ ದಂಪತಿಗಳಿಗೆ ನುದುವೆಯಾಗಿ 25 ವರ್ಷಗಳು ಕಳೆದವು. ಆ ಉತ್ಸವ ಸಂದರ್ಭದಲ್ಲಿ ಆತನು ಭಾರತ ದೇಶಕ್ಕೆ ಪಿಕ್ಚರ್ಸ್ ಸ್ಪೆಟ್ರೋ ಫೋಟೋ ಮಾಟರೆಂಬ ಯಂತ್ರವನ್ನು ಬಹುಮಾನವಾಗಿ ಕೊಟ್ಟನು. ಡಾ|| ಎಸ್ ಪಿ. ಪುರುಷೋತ್ತಂ, ಮಿಸ್ ತಾರದಿಯೋಧರ್ ಎಂಬವರು ಆ ಯಂತ್ರದ ಸಹಾಯದಿಂದ ರಸಾಯನ ಸೂತ್ರಗಳನ್ನನುಸರಿಸಿ, ಬಲಿಷ್ಠಾಹಾರಗಳನ್ನು ತಯಾರಿಸಿ ಕೆಡದಂತೆ ಇಡಲು ಕೆಲಸ ಮಾಡುತ್ತಿರುವರು. ಬರಗಳು ಬಂದರೂ ಈ ಮಾರ್ಗದಿಂದ ಪ್ರಾಣಗಳನ್ನು ನಿಲ್ಲಿಸಿಕೊಳ್ಳಬಹುದು, ಇವರ ಪ್ರಯತ್ನಕ್ಕೆ ಭಾರತ ದೇಶದ ಸರ್ಕಾರವು ಕೂಡ ಸಹಾಯ ಮಾಡುತ್ತಿದೆ.

ಸುಹೃದ್ಭಾವ ಪ್ರಯತ್ನಗಳು

ಅಮೆರಿಕದ ವಿಷಯದಲ್ಲಿ ಇಂಡಿಯಾವಿಗೂ, ಇಂಡಿಯಾವಿನ ವಿಷಯದಲ್ಲಿ ಅಮೇರಿಕಕ್ಕೂ ಪರಸ್ಪರ ಅನುಪಾನಗಳಿವೆ ಅವುಗಳನ್ನು ನಿವಾರಣೆಮಾಡಲು ಉಭಯ ದೇಶಗಳಲ್ಲಿಯ ವಿವೇಕಿಗಳನ್ನು ಸಮಾವೇಶಗೊಳಿಸಿ ಒಬ್ಬರ ಪ್ರಾಂತ್ಯದಲ್ಲಿ ಇನ್ನೊಬ್ಬರು ಉಪನ್ಯಾಸವನ್ನು ಕೊಡಲು ಆತನು ಏರ್ಪಾಡು ಮಾಡಿದನು. ಮೊದಲು ಸರ್, ಎಸ್. ರಾಧಾಕೃಷ್ಣರನ್ನು ಯುನೈಟೆಡ್ ಸ್ಟೇಟ್ಸಿಗೆ ಬರಮಾಡಿಕೊಂಡನು. ತರುವಾಯ ಮೇರೀಲೀ ಕುರ್ಟಿಯನ್ನು ಭಾರತ ದೇಶಕ್ಕೆ ಕಳುಹಿಸಿದನು. ಆತನು ಭಾರತದ ದೇಶದಲ್ಲೆಲ್ಲಾ ಸುತ್ತಿ, ಅನೇಕ ಸಭೆಗಳಲ್ಲಿ ಉಪನ್ಯಾಸ ಮಾಡಿ ಅಮೆರಿಕದ ವೇಲಿನ ಅನುಮಾನಗಳನ್ನು ತೊಲಗಿಸಿದನು. ಲಕ್ನೋ ಉಪನ್ಯಾಸವು ಬಹಳ ಮನೋಹರವಾದದ್ದು. ಅದುದರಿಂದ ಅಮೆರಿಕಾ ಜೀವನವನ್ನು ಕುರಿತು ಅಲ್ಲಿಗೆ ಹೋಗಿ ಓದಬಯಸುವ ಭಾರತ ದೇಶೀಯರಿಗೆ ವಿವರವಾಗಿ ತಿಳಿಸಬಲ್ಲ ವಿದ್ಯಾರ್ಥಿಗಳಿಗೆ " ಮೆರ್ಲೀ ಕರ್ಟಿಸ್ ಅವಾರ್ಡ್ " ಎಂಬ ಹೆಸರಿನಲ್ಲಿ ಒಂದು ಸ್ಕಾಲರ್ ಷಿಪ್ಪನ್ನು ಲಕ್ನೋವಿನ ವಿಶ್ವವಿದ್ಯಾಲಯದವರೂ ಏರ್ಪಾಡು ಮಾಡಿರುವರು.

ಪ್ರತಿ ದೇಶದ ವಿಶ್ವವಿದ್ಯಾಲಯದಲ್ಲಿಯೂ, ಅನ್ಯದೇಶಗಳಲ್ಲಿಯ ಯಥಾರ್ಥ ವಿಷಯಗಳನ್ನು ತಿಳಿಸುವ ಗ್ರಂಥಗಳನ್ನು ಕೂಡಿಸಿಡಲಿಕ್ಕಾಗಿ ವಾಟೂಮಲ್ ದಂಪತಿಗಳು ಏರ್ಪಾಡು ಮಾಡಿರುವರು, ವಾಷಿಂಗ್‌ಟನ್, ನ್ಯೂಯಾರ್ಕ್ ವಿಶ್ವವಿದ್ಯಾಲಯಗಳಲ್ಲಿ ಭಾರತ ದೇಶದ ವ್ಯವಹಾರಗಳ ಏರ್ಪಾಟು ಮಾಡಿರು ಪಾಲಿಗೆ ಕೊಲಂಬಿಯಾ ಯದಲ್ಲಿ ಭಾರತ ದೇಶದ ವಿಜ್ಞಾನನನ್ನು ಕುರಿತು ಯನ್ನು ಮಾಡಿ ಚರಿತ್ರೆಯನ್ನು ಲು ರಿಸರ್ಚ್ ಫೆಲೋಷಿಪ್ಪನ್ನು ಸಿರುವರು. ಆತನು ಆ ಗ್ರಂಥ ಬರೆಯುತ್ತಿರುವನು.

ಸ್ವಪ್ನ ಸಾಫಲ್ಯ

ವಾಟೂಮಲ್ ಸ್ಥಾಪನೆ ಮಾಡಿ ಸ್ಕಾಲರ್‌ಷಿಪ್ ಸಂಸ್ಥೆಯು ಭಾರತ ದೇಶವದಾನ್ಯರಿಗೆ ಆದರ್ಶವಾಗಿದೆ ಈಗ ಭಾರತದೇಶವೇ ವಿವಿಧ ವಿದೇಶಗಳಿಗೆ ಹೋಗುವ ವಿದ್ಯಾರ್ಥಿಗಳಿಗಾಗಿ 160 ಗ್ರಾಜ್ಯುಯೇಟು ಫೆಲೋಷಿಪ್‌ಗಳನ್ನು ಏರ್ಪಾಡುಮಾಡಿದೆ. ಅನೇಕರು ಅಮೆರಿಕವನ್ನು ಬಯಿಸುವುದನ್ನು ಕಂಡಾಗ ವಾಟೂಮಲ್ಲಿಗೆ ಪರಮಾನಂದವಾಗುತ್ತದೆ.

1946 ನೇ ಜುಲೈ ತಿಂಗಳಲ್ಲಿ ಅಮೆರಿಕಾ ಕಾಂಗ್ರೆಸ್ ಓರಿಯಂಟಲ್ ಇಗ್ರೇಷನ್ ಆಕ್ಟನ್ನು ಪುನರ್ವಿಮರ್ಶ ಮಾಡಿತು. ಈಗ ಭಾರತೀಯರು ಅಮೆರಿಕಾ ಪೌರರಾಗಬಹುದು. 28 ಗಳ ನಂತರ ವಾಟೂಮಲ್ ಅಮೆರಿಕಾ ಪೌರನಾಗಿ ಅಂಗೀಕರಿಸಲ್ಪಟ್ಟನೇ ಮೊದಲನೆಯ ಅಮೆರಿಕ ಮಿತ್ರರು ಇದಕ್ಕಾಗಿ ಆತನನ್ನು ಮಾಡಿದರು, ಪತ್ರಿಕೆಗಳು ಸಂಪಾದಯ ವ್ಯಾಸಗಳನ್ನು ಬರೆದವು.

ಕಷ್ಟಾರ್ಜಿತವನ್ನು ಇತರರಿಗೆ ಕೊಏಕೆ, ಪರದೇಶದಲ್ಲಿ ಜೀವಿಸಲು ಕಲಿಏಕೆ, ಇವೆರಡೂ ಕಷ್ಟತರ ಕಾರ್ಯಳೆಂದು ಒಂದು ಭಾರತೀಯ ನಾಣ್ಣುಯುಂಟು. ಈ ಎರಡನ್ನೂ ನಿವಸಿದ ಧೀರನು ಬಿ. ಜೆ. ವಾಟೂವ

(ಮಹಾ

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ

Save the C

ಗೋವಧೆ ನಿಲ್ಲ

Edited, Printed and Publishe by M S Krishna Rao at th Satyavadi Press, C Agrahar, Mysore,